ಸಚಿವ ಸಂಪುಟದ ಆಚಾರ ಸಂಹಿತೆಯ ಪ್ರಕಾರ ಒಂದು ಆಜ್ಞೆ ಬಂದಿದೆ. ಅದರ ಪ್ರಕಾರ ಯಾವುದೇ ಕಡತವನ್ನು ೧೫ ದಿನಗಳಲ್ಲಿ ಎಲೇವಾರಿ ಮಾಡುತ್ತೇವೆಂದು ಹೇಳಿದ್ದಾರೆ. ಆ ಆಜ್ಞಾನುಸಾರ ಬೆಳಗೆ ಈ ಕೆಲಸ ಪೂರೈಸುವ ವ್ಯವಸ್ಥೆ ಮಾಡುತ್ತೀರಾ ? ಯಾವುದೂ ಬಾಕಿ ಇರಬಾರದು.

ಡಾ. ಹೆಗ್ಗಪ್ಪ ಡಿ. ಲಮಾಣಿ :- ಈಗ ಮಂಜೂರಾಗಿದ್ದ ಹುದ್ದೆಗಳನ್ನು ಹೇಳಿದೆ. ರಿಟೈರ್‌ಮೆಂಟ್ ಆದವರು, ಖಾಲಿ ಬಿದ್ದ ಹುದ್ದೆಗಳು ೧೩ ಸಾವಿರ, ಅವನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ೧೫ ದಿನಗಳೊಳಗೆ ಕಡತ ಎಲೇವಾರಿ ಮಾಡಬೇಕೆಂಬ ಆಚಾರ ಸಂಹಿತೆ ಬಗ್ಗೆ ಹೇಳಿದರು. ಅದನ್ನೂ ಸಹಾ ಪ್ರಯತ್ನ ಮಾಡುತ್ತಿದ್ದೇವೆ. ಅವರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿದ್ದೇವೆ. ಆಚಾರ ಸಂಹಿತೆ ಪಾಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ವಿದ್ಯಾರ್ಥಿಗಳು ಅಧ್ಯಯನದಿಂದ ವಂಚಿತರಾಗಿದ್ದಾರೆಂದು ಹೇಳುತ್ತಿದ್ದಾರೆ. ಅಂತಹ ವರದಿ ನಮಗೆ ಬಂದಿಲ್ಲ. ಏಕೆಂದರೆ ಒಂದು ಶಾಲೆಯಲ್ಲಿ ಅಧ್ಯಾಪಕರು ಕಡಿಮೆ ಆದರು ಎಂದರೆ ಬೇರೆ ಶಾಲೆಯಿಂದ ಡೆಪ್ಯೂಟ್ ಮಾಡಿ ಅವರಿಗೆ ಅಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ. ಒಂದು ಹೈಸ್ಕೂಲಿನಲ್ಲಿ ಯಾವುದೇ ವಿಷಯದ ಅಧ್ಯಾಪಕರ ಕೊರತೆ ಬಂದರೆ ಬೇರೆ ಹೈಸ್ಕೂಲಿನಿಂದ ಡೆಪ್ಯೂಟ್ ಮಾಡಿ, ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ. ಇಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳದೇ ಹಾಗೇ ಪ್ರಮೋಷನ್ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಅವರಿಗೆ ಪರೀಕ್ಷೆ ಬೇಕಾಗುತ್ತದೆ. ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆನ್ನುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಾ ರೀತಿಯಿಂದ ವ್ಯವಸ್ಥೆ ಮಾಡಿ ಶಿಕ್ಷಣ ಕೊಡಿಸಿದ್ದೇವೆ. ಪರೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಪರೀಕ್ಷೆ ಪಾಸ್ ಆದಮೇಲೆ ಮುಂದಿನ ಕ್ಲಾಸ್‌ಗೆ ಕಳುಹಿಸುತ್ತೇವೆ.

ಶ್ರೀ ಜಿ. ರಾಜುಗೌಡ:- ಪರೀಕ್ಷೆ ಇಲ್ಲದೇ ಪ್ರಮೋಶನ್ ಕೊಟ್ಟಿದ್ದೀರಿ. ಪರೀಕ್ಷೆ ತೆಗೆದುಕೊಂಡಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ಉತ್ತರ ಕೊಡಿ. (ಉತ್ತರ ಇಲ್ಲ)

ಅಧ್ಯಕ್ಷರು :- ಈಗ ಮುಂದಿನ ಪ್ರಶ್ನೆ.

ವಿಷಯ :- ಹೊಳಲ್‌ಕೆರೆ ಆಸ್ಪತ್ರೆಗೆ ಸೌಲಭ್ಯಗಳನ್ನು ಒದಗಿಸದಿರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೨:- (೧೭)
ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ)
ಮಾನ್ಯ ಮುಖ್ಯಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೊಳಲ್‌ಕೆರೆ ಆಸ್ಪತ್ರೆಯು ಈವರೆಗೆ ಪ್ರಾಥಮಿಕ ಆರೋಗ್ಯ ಘಟಕವಾಗಿ ೩೦ ಹಾಸಿಗೆಗಳನ್ನು ಮಾತ್ರ ಹೊಂದಿದ್ದು ಈಗ ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತನೆಗೊಂಡಿದ್ದರೂ ಸಹ ಸಾರ್ವಜನಿಕ ಆಸ್ಪತ್ರೆಗೆ ಒದಗಿಸಬೇಕಾದ ಸೌಲಭ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಸದರಿ ಜನರಲ್ ಆಸ್ಪತ್ರೆಗೆ ೧೦೦ ಹಾಸಿಗೆಗಳನ್ನಾದರೂ ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಮುಖ್ಯ ಮಂತ್ರಿಗಳ ಪರವಾಗಿ ಶ್ರೀ ಬ್ಲೇಸಿಯಸ್ ಎಂ. ಡಿಸೋಜ್
(ಕಾರ್ಮಿಕ ಸಚಿವರು)

ಹೊಳಲ್‌ಕೆರೆ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತಿಸಿರುವುದಿಲ್ಲ. ಅದನ್ನು ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲಾಗಿರುತ್ತದೆ.

ದಂತ ಚಿಕಿತ್ಸಾ ಘಟಕವನ್ನು ಬಿಟ್ಟು ಉಳಿದ ಎಲ್ಲಾ ಸೌಲಭ್ಯಗಳನ್ನು ಒದಗಿಸಿದೆ.

ಪ್ರಸಕ್ತ ಸಾಲಿನಲ್ಲಿ ಇಲ್ಲ.

ಶ್ರೀ ಎ.ವಿ. ಉಮಾಪತಿ:- ಮಾನ್ಯ ಅಧ್ಯಕ್ಷರೇ, ಹೊಳಲ್‌ಕೆರೆ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತಿಸಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಇದು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿದ್ದು ಸಾರ್ವಜನಿಕ ಆಸ್ಪತ್ರೆಯಾಗಿ ಸುಮಾರು ವರ್ಷಗಳು ಕಳೆದಿದ್ದರೂ ಸಹ ಆಸ್ಪತ್ರೆಗೂ ಸರ್ಕಾರಕ್ಕೂ ಸಂಬಂಧವಿಲ್ಲವೇನೋ ಎನ್ನುವಹಾಗೆ ಸರ್ಕಾರದಿಂದ ಉತ್ತರ ಬಂದಿದೆ. ಮುಖ್ಯವಾಗಿ ೩೦ ಹಾಸಿಗೆಯುಳ್ಳ ಸಮುದಾಯ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದೆ, ದಂತ ಚಿಕಿತ್ಸಾ ಘಟಕವನ್ನು ಬಿಟ್ಟು ಉಳಿದೆಲ್ಲಾ ಸೌಕರ್ಯಗಳನ್ನು ಒದಗಿಸಲಾಗಿದೆಯೆಂದು ಹೇಳಿದ್ದಾರೆ. ಸಾರ್ವಜನಿಕ ಆಸ್ಪತ್ರೆಯಾಗಿ ಸುಮಾರು ವರ್ಷಗಳೇ ಆಗಿದ್ದರೂ ಕೇವಲ ೩೦ ಹಾಸಿಗೆಗಳನ್ನು ಬಿಟ್ಟರೆ ಏನೂ ಬೇರೆ ಸೌಕರ್ಯಗಳು ಇಲ್ಲ. ಹೊಳಲ್‌ಕೆರೆ ತಾಲ್ಲೂಕು ಕೇಂದ್ರವಾಗಿದ್ದು ಅಲ್ಲಿರತಕ್ಕ ರೋಗಿಗಳ ಒಂದು ಪರಿಸ್ಥಿತಿ ನೋಡಿದರೆ ಬಹುಶಃ ಯಾವುದೇ ಒಂದು ಹತ್ತಿರದ ಆಸ್ಪತ್ರೆ ಸೌಕರ್ಯ ಈ ಕೇಂದ್ರಕ್ಕೆ ಇಲ್ಲ. ರೋಗಿಗಳು ಚಿತ್ರದುರ್ಗ ಅಥವಾ ದಾವಣಗೆರೆಗೆ ಹೋಗಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಆಸ್ಪತ್ರೆಯನ್ನು ೧೦೦ ಹಾಸಿಗೆಯುಳ್ಳ ಆಸ್ಪತ್ರೆ ದರ್ಜೆಗೆ ಏರಿಸಬೇಕೆಂದು ಕೇಳಿದ್ದೇವೆ. ಇದಕ್ಕೆ ಸರ್ಕಾರ ಸರಿಯಾದ ಉತ್ತರ ಕೊಟ್ಟಿಲ್ಲ. ಇನ್ನಾದರೂ ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರ ಗಮನ ಕೊಡುತ್ತದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೇ, ಇದು ಒಂದು ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿದ್ದು, ೩೦ ಬೆಡ್ಡಿನ ಒಂದು ಆಸ್ಪತ್ರೆ ಅಲ್ಲಿದೆ. ಅದೆ ರೀತಿ ಅಲ್ಲಿ ಆಪರೇಷನ್ ಕೊಠಡಿ, ಎಕ್ಸ್-ರೇ ಮೆಷಿನ್ ಇದ್ದು ಸರಿಯಾಗಿ ಕೆಲಸ ನಡೆಯುತ್ತಿದೆ. ನಮ್ಮ ರಾಜ್ಯದ ಒಂದು ಧ್ಯೇಯಧೋರಣೆಯ ಪ್ರಕಾರ ೧ ಸಾವಿರ ಜನಸಂಖ್ಯೆಗೆ ಒಂದು ಹಾಸಿಗೆ ಪ್ರಕಾರ ಇರಬೇಕು. ಆದರೆ ಈಗಿನ ಪರಿಸ್ಥಿತಿಯಲ್ಲಿ ೧೩೪೨ ಜನಸಂಖ್ಯೆಗೆ ಒಂದು ಹಾಸಿಗೆ ಇದೆ. ಆದ್ದರಿಂದ ನಾವು ಇನ್ನು ೨೦೦೦ನೇ ಇಸವಿ ಮುಟ್ಟುವ ಮುಂಚೆ ಎಲ್ಲಾ ಕಡೆ ೧ ಸಾವಿರ ಜನಸಂಖ್ಯೆಗೆ ಒಂದು ಬೆಡ್ ಪ್ರಕಾರ ಆಸ್ಪತ್ರೆ ಮಾಡುವುದಕ್ಕೆ ಒಂದು ಯೋಜನೆಯನ್ನು ಹಾಕಿದ್ದೇವೆ. ಮತ್ತು ಹೊಳಲ್‌ಕೆರೆ ಆಸ್ಪತ್ರೆಯನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡುವುದಕ್ಕೆ ಈಗ ಸರ್ಕಾರದ ಮುಂದೆ ಯೋಜನೆ ಇಲ್ಲ.

ಶ್ರೀ ಎ.ವಿ. ಉಮಾಪತಿ:- ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರ ಹೊಳಲ್‌ಕೆರೆ, ಈ ಆಸ್ಪತ್ರೆ ಸಾರ್ವಜನಿಕರ ಆಸ್ಪತ್ರೆ ಎಂದು ತಮ್ಮ ಗಮನಕ್ಕೆ ತಂದಿದ್ದೇನೆ. ಇದು ಸಾರ್ವಜನಿಕರ ಆಸ್ಪತ್ರೆ ಆಗಿಲ್ಲ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಕಳೆದ ೧ ವರ್ಷದಿಂದ ಆಸ್ಪತ್ರೆಯಲ್ಲಿ ಎಕ್ಸ್-ರೇ ಟೆಕ್ನೀಷಿಯನ್ ಕೂಡಾ ಅಲ್ಲಿ ಇಲ್ಲ . ಮಾನ್ಯ ಪುಟ್ಟಸ್ವಾಮಿಗೌಡರು ಆರೋಗ್ಯ ಸಚಿವರಾಗಿದ್ದಾಗ ಮತ್ತು ಅವರು ಅಲ್ಲಿ ಬಂದಾಗ ಈ ಎಕ್ಸರೇ ಟೆಕ್ನೀಷಿಯನ್ ಅಲ್ಲಿ ಇಲ್ಲದೆ ಇದ್ದುದರಿಂದ ಸ್ಥಳದಲ್ಲಿಯೇ ಅವರನ್ನು ಅಮಾನತ್ತಿನಲ್ಲಿ ಇಟ್ಟರು. ಅಲ್ಲಿಂದ ಇಪತ್ತಿನವರೆಗೂ ಎಕ್ಸ್-ರೇ ಟೆಕ್ನೀಷಿಯನ್ ಬಂದಿಲ್ಲ. ಅದು ಹಾಗೇಯೇ ಖಾಲಿ ಇದೆ. ಇದರಿಂದಾಗಿ ಈ ಸೌಲಭ್ಯ ಕೂಡ ಆ ಭಾಗದ ಜನರಿಗೆ ಸಿಗುತ್ತಿಲ್ಲ.

೧೨.೦೦ ಪಿ.ಎಂ.

ಅನಂತರ ಪ್ರಸಕ್ತ ಸಾಲಿನಲ್ಲಿ ಈವೊಂದು ಪ್ರಸ್ತಾವ ಬಂದಿಲ್ಲವೆಂದು ಹೇಳಿ ಇಲ್ಲಿ ಉತ್ತರವನ್ನು ಕೊಡಲಾಗಿದೆ. ಕಳೆದ ಸಲ ನಾನು ನೂರು ಬೆಡ್ಡಿನ ಹಾಸ್ಪಿಟಲ್‌ಗೆ ಪರಿವರ್ತನೆ ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದು ಸರ್ಕಾರದಲ್ಲಿ ಒತ್ತಾಯ ಮಾಡಿದ್ದೇನೆ. ಆದರೂ ಸರ್ಕಾರ ಪ್ರಸಕ್ತ

ಸಾಲಿನಲ್ಲಿ ಇಲ್ಲವೆಂದು ಹೇಳಿದೆ. ನಾನು ತಮ್ಮ ಮುಖಾಂತರ ಏನಂತಿಸಿಕೊಳ್ಳುವುದೇನೆಂದರೆ ಇದು ತಾಲ್ಲೂಕು ಕೇಂದ್ರವಾಗಿದ್ದು ಅಲ್ಲಿ ಯಾವುದೇ ಸೌಲಭ್ಯವಿಲ್ಲದೆ ಇರುವಂತಹ ಪರಿಸ್ಥಿತಿ ಇದೆ. ತಾವು ಆ ಆಸ್ಪತ್ರೆಗೆ ಬಂದು ನೋಡಿದರೆ ಗೊತ್ತಾಗುತ್ತದೆ. ಆಸ್ಪತ್ರೆಯ ಹೊರಗಡೆ ಮರದ ಕೆಳಗೆ ರೋಗಿಗಳು ಇದ್ದಾರೆ. ಅಂತಹ ಒಂದು ಪರಿಸ್ಥಿತಿಯಲ್ಲಿರತಕ್ಕ ಒಂದು ಆಸ್ಪತ್ರೆಗೆ ಈ ಸಾಲಿನಲ್ಲಿ ಆದರೂ ೫೦ ಬೆಡ್‌ಗಳಿಗೆ ಪರಿವರ್ತನೆ ಮಾಡಿ ಕೊಡುತ್ತಾರೆಯೆ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಅಲ್ಲಿಯ ಎಕ್ಸ್-ರೇ ಟೆಕ್ನಿಶಿಯನ್ ಅವರನ್ನು ಸಸ್ಪೆಂಡ್ ಮಾಡಿದ್ದುದು ಸರಿ. ಎಕ್ಸ್-ರೇ ಟೆಕ್ನಿಶಿಯನ್ ಒಬ್ಬರನ್ನು ಬೇಗನೆ ಭರ್ತಿ ಮಾಡುತ್ತೇವೆ. ನಾನು ಆಗಲೇ ಹೇಳಿದಹಾಗೆ ತಾಲ್ಲೂಕು ಸಬ್ ಡಿವಿಜನ್‌ನಲ್ಲಿ ೫೦ ಬೆಡ್‌ಗಳ ಆಸ್ಪತ್ರೆಯನ್ನು ಮಾತ್ರ ಸ್ಯಾಂಕ್ಷನ್ ಮಾಡುತ್ತೇವೆ. ತಾಲ್ಲೂಕು ಹೆಡ್‌ಕ್ವಾಟ್ರರ್ಸ್‌ನಲ್ಲಿ ನೂರು ಬೆಡ್‌ಗಳ ಆಸ್ಪತ್ರೆಯನ್ನು ಎಲ್ಲಿಯೂ ಸಹ ಮಂಜೂರು ಮಾಡಿಲ್ಲ. ಅಗತ್ಯ ಬಿದ್ದಲ್ಲಿ ನೀವು ಅದರ ಬಗ್ಗೆ ಕನ್ವಿನ್ಸ್ ಮಾಡಿದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ವಿಷಯ:- ಬೆಂಗಳೂರು ನಗರದಲ್ಲಿ ಕೆ.ಎಂ.ಎಫ್. ಬಲ್ಕ್ ವೆಂಡಿಂಗ್ ಬೂತ್‌ಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. ೩೩:- (೨೮೫)
ಶ್ರೀ ಆರ್. ದಯಾನಂದ ರಾವ್, (ಗಾಂಧಿನಗರ)
ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಕೆಲಸ ನಿರ್ವಹಿಸುತ್ತಿರುವ ಬಲ್ಕ್ ವೆಂಡಿಂಗ್ ಬೂತುಗಳ ಒಟ್ಟು ಸಂಖ್ಯೆ.
ಆ) ಪ್ರತಿ ಬೂತಿಗೆ ತಗಲುವ ನೀರು ವಿದ್ಯುಚ್ಛಕ್ತಿ, ಮತ್ತು ಇತರೆ ಖರ್ಚುಗಳ ಸರಾಸರಿ ಮಾಸಿಕ ನಿರ್ವಹಣಾ ವೆಚ್ಚ.
ಇ) ಎಲ್ಲಾ ಖರ್ಚುವೆಚ್ಚಗಳನ್ನು ಕಳೆದು ಗಳಿಸುವ ಸರಾಸರಿ ಆದಾಯ (ಎಲ್ಲಾ ಬೂತುಗಳಿಂದಲೂ)
ಈ) ಎಲ್ಲಾ ಬೂತುಗಳಿಂದಲೂ ಸೇರಿ ಮಾಸಿಕ ನಷ್ಟ.
ಉ) ಈ ಹಾಲು ಬೂತುಗಳನ್ನು ಮೇಲ್ವಿಚಾರಣೆ ಅಧಿಕಾರದೊಂದಿಗೆ ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ. ಕೆ.ಎನ್. ನಾಗೇಗೌಡ
(ಪಶು ಸಂಗೋಪನಾ ರಾಜ್ಯ ಸಚಿವರು)

೧೧೯
ರೂ. ೩,೮೫೬-೦೦
ಪ್ರತಿ ತಿಂಗಳ ಒಟ್ಟು ಆದಾಯ ರೂ. ೫೩,೮೬೧-೦೦ ಸರಾಸರಿ ಆದಾಯ ರೂ. ೪೫೩-೦೦.
ಉದ್ಭವಿಸುವುದಿಲ್ಲ.
ಇಲ್ಲ.

ಶ್ರೀ ಆರ್. ದಯಾನಂದ ರಾವ್:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ೧೯೦ ಬೂತ್‌ಗಳಿಂದ ೫೩,೮೬೧ ರೂಪಾಯಿ ಆದಾಯ ಬರತ್ತಿದ್ದು, ಸರಾಸರಿ ಒಂದು ಬೂತ್‌ನಿಂದ ೪೫೩ ರೂಪಾಯಿ ಆದಾಯ ಸಿಗುತ್ತದೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ. ಒಂದು